ನಗರ ಮತ್ತು ಗ್ರಾಮಾಂತರ ಯೋಜನಾ
ಸಹಾಯಕ ನಿರ್ದೇಶಕರ ಕಛೇರಿ
ನಂ. 217/88, ಮೊದಲನೇ ಮಹಡಿ,
ಫಾರ್ಮಸಿ ಕಾಲೇಜು ಹಿಂಭಾಗ,
ಬಿ.ಜಿ. ಬ್ಯಾಂಕ್ ರಸ್ತೆ, ಚಿಕ್ಕಬಳ್ಳಾಪುರ

ಕರ್ನಾಟಕ ಸರ್ಕಾರ

ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ

ಸಂ:ನಗ್ರಾಯೋಸನಿ/ಚಿಬ/ವಿನ್ಯಾಸ/18/2020-21/612

ದಿನಾಂಕ: ೨೦.೧೦.೨೦೨೦

## ತಾಂತ್ರಿಕ ಅನುಮೋದನೆ

ವಿಷಯ:- ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಕುರುಗೋಡು ಗ್ರಾಮದ ಸ.ನಂ. 83/26 ರಲ್ಲಿ 01ಎಕರೆ 20ಗುಂಟೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:-
1) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದೊಡ್ಡಕುರುಗೋಡು ಗ್ರಾಮ ಪಂಚಾಯಿತಿ ಕಾರ್ಯಾಲಯ ರವರ ಪತ್ರ ಸಂಖ್ಯೆ: ಗ್ರಾ.ಪಂ.ಚಿ/ಸಕಾಲ/01/2020-19 ದಿನಾಂಕ: 14.08.2020
2) ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರ ಅಧಿಕೃತ ಜ್ಞಾಪನ ಪತ್ರ ಅರ್ಜಿ ಸಂಖ್ಯೆ: 145516 ದಿನಾಂಕ: 05.08.2020
3) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕೈಪಿಡಿ ಸಂಖ್ಯೆ: ಗ್ರಾಅಪ 86 ಗ್ರಾಪಂಅ 2014 ದಿನಾಂಕ: 11.11.2014.

*-*-*-*-*

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಕುರುಗೋಡು ಗ್ರಾಮದ ಸ.ನಂ. 83/26 ರಲ್ಲಿ 01ಎಕರೆ 20ಗುಂಟೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಲು ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಲಾಗಿದೆ. ಸದರಿ ಜಮೀನನ್ನು ಉಲ್ಲೇಖ(2) ರಂತೆ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಇವರು ವಸತಿ ಉದ್ದೇಶಕ್ಕಾಗಿ ಭೂ-ಪರಿವರ್ತಿಸಿ ಅಧಿಕೃತ ಜ್ಞಾಪನ ಪತ್ರವನ್ನು ಹೊರಡಿಸಲಾಗಿರುತ್ತದೆ. ವಿನ್ಯಾಸ ಅನುಮೋದನೆ ಸಂಬಂಧ ಅರ್ಜಿದಾರರು ವಿನ್ಯಾಸ ನಕ್ಷೆ ತಯಾರಿಕಾ ಶುಲ್ಕ ರೂ. 3600/-ಗಳನ್ನು ಎಸ್.ಬಿ.ಐ ಚಲನ್ ಸಂಖ್ಯೆ: 120222827 ರಲ್ಲಿ ದಿನಾಂಕ: 17.10.2020 ರಂದು ಪಾವತಿಸಿರುತ್ತಾರೆ. ಆದ್ದರಿಂದ, ಪ್ರಸ್ತಾವನೆಯನ್ನು ಪರಿಶೀಲಿಸಿ ನಿಯಮಾನುಸಾರ ವಸತಿ ವಿನ್ಯಾಸ ನಕ್ಷೆಯನ್ನು ತಯಾರಿಸಲಾಗಿದ್ದು ಈ ನಕ್ಷೆಯಂತೆ ವಸತಿಗಾಗಿ 3315.29 ಚ.ಮೀ.(ಶೇ.54.62), ಉದ್ಯಾನವನಕ್ಕಾಗಿ 311.81 ಚ.ಮೀ.(ಶೇ.05.14), ನಾಗರೀಕ ಸೌಲಭ್ಯಕ್ಕಾಗಿ 316.55 ಚ.ಮೀ.(ಶೇ.05.21) ಮತ್ತು ರಸ್ತೆಗಾಗಿ 2126.55 ಚ.ಮೀ.(ಶೇ.35.03) ಕಾಯ್ದಿರಿಸಿದೆ. ಈ ವಿನ್ಯಾಸದಲ್ಲಿ 12.19ಮೀX18.28ಮೀ ಅಳತೆಯ 03 ನಿವೇಶನಗಳು, 9.14ಮೀX12.19ಮೀ ಅಳತೆಯ 11 ನಿವೇಶನಗಳು, 9.14ಮೀXಅನಿಯತ ಅಳತೆಯ 03 ನಿವೇಶನಗಳು ಮತ್ತು ಅನಿಯತ ಅಳತೆಯ 06 ನಿವೇಶನಗಳು ಒಟ್ಟು 23 ನಿವೇಶನಗಳನ್ನು ಗುರುತಿಸಲಾಗಿದೆ.

ಸದರಿ ವಿನ್ಯಾಸವನ್ನು ಕಾರ್ಯಗತಗೊಳಿಸುವ ಸಂಬಂಧ ಗ್ರಾಮ ಪಂಚಾಯಿತಿಯು ವಿನ್ಯಾಸ ಅನುಮೋದನೆ ಆದೇಶ ಹೊರಡಿಸಬೇಕಾಗಿದ್ದು ಉಲ್ಲೇಖ(3) ರ ಕೈಪಿಡಿಯಲ್ಲಿನ ಮಾರ್ಗಸೂಚನೆಗಳನ್ನು ಹಾಗೂ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಅನುಸರಿಸುವ ನಿಬಂಧನೆಗೊಳಪಟ್ಟು ವಿನ್ಯಾಸಯನ್ನು ಕಾರ್ಯರೂಪಕ್ಕೆ ತರಲು ತಾಂತ್ರಿಕ ಅನುಮೋದನೆ ನೀಡಲಾಗಿದೆ.

<u>ನಿಬಂಧನೆಗಳು:</u>

1. **ವಿನ್ಯಾಸವು ಅನುಮೋದನೆ ದಿನದಿಂದ ಎರಡು ವರ್ಷಗಳ ಅವಧಿಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸ ಅಭಿವೃದ್ಧಿ ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು. (ಕೈಪಿಡಿಯ ಮಾರ್ಗಸೂಚಿಯನ್ವಯ)**
2. ಅಭಿವೃದ್ಧಿ ಶುಲ್ಕವನ್ನು ಅಂದಾಜು ಪಟ್ಟಿಯಂತೆ ಹಾಗೂ ಇತರೆ ಶುಲ್ಕಗಳನ್ನು ಕಾನೂನು ಪ್ರಕಾರ ಹಾಗೂ ಸರ್ಕಾರಿ ಆದೇಶಗಳನ್ವಯ ಪಡೆಯತಕ್ಕದ್ದು.
3. ಅನುಮೋದಿತ ವಿನ್ಯಾಸ ನಕ್ಷೆಯಲ್ಲಿರುವಂತೆಯೇ ನಿವೇಶನಗಳು, ಉದ್ಯಾನವನ, ರಸ್ತೆಗಳು ಮತ್ತಿತರ ಸಾರ್ವಜನಿಕ ಉದ್ದೇಶದ ಪ್ರದೇಶಗಳನ್ನು ಅಭಿವೃದ್ಧಿಪಡಿಸತಕ್ಕದ್ದು.
4. **ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಪೂರ್ವಾನುಮತಿಯಿಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.**
5. ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರತಕ್ಕ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು, ಮತ್ತು ರಸ್ತೆಗಳ ಎರಡು ಕಡೆ ಹೊಸ ಸಸಿಗಳನ್ನು ಬೆಳಸಲು ಸೂಕ್ತ ಕ್ರಮಕೈಗೊಳ್ಳತಕ್ಕದ್ದು.
6. ಸ್ಥಳೀಯ ಸಂಸ್ಥೆಯು ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆ, ಉದ್ಯಾನವನ & ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಪ್ರದೇಶಗಳನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯು/ಗ್ರಾಮ ಪಂಚಾಯಿತಿಯು ಅರ್ಜಿದಾರರಿಗೆ/ಅಭಿವೃದ್ಧಿದಾರರಿಗೆ ಯಾವುದೇ ಪರಿಹಾರವನ್ನು ನೀಡದೆ ಮುಕ್ತಟೆಯಾಗಿ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಿಕೊಳ್ಳತಕ್ಕದ್ದು.
7. ವಿನ್ಯಾಸವನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರವೇ ಗ್ರಾಮ ಪಂಚಾಯ್ತಿಯಿಂದ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡತಕ್ಕದ್ದು.
8. ನಿವೇಶನ ಬಿಡುಗಡೆಯ ಮೊದಲನೇ ಹಂತವಾಗಿ ಶೇ.60 ರಷ್ಟು ಹಾಗೂ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅರ್ಜಿದಾರರು/ಅಭಿವೃದ್ಧಿದಾರರು ಒದಗಿಸಿದ ನಂತರ ಉಳಿಕೆ ಶೇ.40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡತಕ್ಕದ್ದು. (ಕೈಪಿಡಿಯ ಮಾರ್ಗಸೂಚಿಯನ್ವಯ)

--2

Scanned with CamScanner

9. ಅನುಮೋದಿತ ವಿನ್ಯಾಸದ ಸೂಕ್ತ ಸ್ಥಳಗಳಲ್ಲಿ ನೀರು ಇಂಗುಗುಳಿ (**Water Recharge**) ಮತ್ತು ಮಳೆ ನೀರು ಸಂಗ್ರಹಣೆ (**Rainwater harvesting pits**) ಗಳನ್ನು ಗುರ್ತಿಸಿ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
10. ವಿನ್ಯಾಸ ಅಂಗೀಕಾರ ಸಂಬಂಧ ಇತರೆ ಯಾವುದೇ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕಾದ್ದಲ್ಲಿ ಅರ್ಜಿದಾರರಿಂದ ಅಂತಹ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.
11. ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ ಹಾಗೂ ಕೆರೆ ಮುಂತಾದವುಗಳಿಗೆ ಸದರಿ ಪ್ರದೇಶದಿಂದ ಯಾವುದೇ ಮಲಿನ ನೀರನ್ನು ಹರಿಯ ಬಿಡಬಾರದು.
12. ಅನುಮೋದಿತ ವಿನ್ಯಾಸದಲ್ಲಿ ಕೊಳವೆ ಬಾವಿಯನ್ನು ತೆರೆಯುವಾಗ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು ಹಾಗೂ ತೆರೆದ ಬಾವಿಯ ಬಗ್ಗೆ ಭೂ-ಮಾಲೀಕರುಗಳು ಮತ್ತು ಸ್ಥಳೀಯ ಸಂಸ್ಥೆಗಳು ಸಂರಕ್ಷಣೆ ಮಾಡಲು ದಿನಾಂಕ: 31.12.2012 ಮತ್ತು ದಿನಾಂಕ:06.08.2014 ರಂದು ಸರ್ಕಾರವು ನೀಡಿರುವ ನಿರ್ದೇಶನಗಳಂತೆ ತಪ್ಪದೇ ಕ್ರಮವಹಿಸತಕ್ಕದ್ದು.
13. ಸದರಿ ಬಡಾವಣೆಯಲ್ಲಿ ಸುತ್ತಲೂ ಕಂಪೌಂಡ್ ನಿರ್ಮಿಸಿ, ಗೇಟನ್ನು ಅಳವಡಿಸಿ **"ಗೇಟೆಡ್ ಕಮ್ಯುನಿಟಿ"** ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಹಾಗೂ ಸದರಿ ಬಡಾವಣೆಯಲ್ಲಿನ ರಸ್ತೆ, ಉದ್ಯಾನವನ/ ಬಯಲುಜಾಗ ಮತ್ತು ನಾಗರೀಕ ಸೌಲಭ್ಯ ನಿವೇಶನಗಳು ಸಾರ್ವಜನಿಕ ಸ್ವತ್ತಾಗಿರುತ್ತದೆ ಆದ್ದರಿಂದ ಸಾರ್ವಜನಿಕ ಸ್ವತ್ತುಗಳನ್ನು ಮುಕ್ತವಾಗಿ ಇಡತಕ್ಕದ್ದು.
14. ಈ ಅನುಮೋದಿತ ವಿನ್ಯಾಸ ನಕ್ಷೆಯು ನಿಗಧಿಪಡಿಸಲಾದ ಮಾಪನ (ಸ್ಕೇಲ್)ದಲ್ಲಿ ವ್ಯತ್ಯಾಸ ಇರುವುದು ಕಂಡುಬಂದಲ್ಲಿ ಅದನ್ನು ಸೂಕ್ತವಾಗಿ ಸ್ಥಳ ವಸ್ತು ಸ್ಥಿತಿ ಹಾಗೂ ಅಳತೆ ಪರಿಮಾಣಕ್ಕೆ ಅನುಗುಣವಾಗಿ ಪರಿಷ್ಕೃತ ವಿನ್ಯಾಸಕ್ಕೆ ಅನುಮೋದನೆ ಪಡೆದುಕೊಳ್ಳತಕ್ಕದ್ದು.
15. ಈ ಅನುಮೋದನೆಯು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವುದಕ್ಕೆ ಉಪಯೋಗಿಸಲು ಬರುವುದಿಲ್ಲ.
16. **ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಯು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನಾಗಿ ರದ್ದುಗೊಳ್ಳುತ್ತದೆ. ಹಾಗೂ ಒಟ್ಟಾರೆ ಪ್ರಸ್ತಾವನೆಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ.**
17. ಕಂದಾಯ ಇಲಾಖೆಯಿಂದ ನೀಡಿರುವ ಸರ್ವೆನಕ್ಷೆಯ ಆಧಾರದ ಮೇಲೆ ವಿನ್ಯಾಸ ನಕ್ಷೆಯನ್ನು ತಯಾರಿಸಲಾಗಿದ್ದು, ವಿನ್ಯಾಸದ ಎಲ್ಲೆ ಹಾಗೂ ಅನಿಯತ ನಿವೇಶನಗಳ ಅಂತಿಮ ಅಳತೆಗಳನ್ನು ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿದ ನಂತರ ನಿರ್ಧರಿಸುವುದು.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ
ಸಹಾಯಕ ನಿರ್ದೇಶಕರು,
ಚಿಕ್ಕಬಳ್ಳಾಪುರ.

<u>ಪ್ರತಿಯನ್ನು:-</u>

1. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದೊಡ್ಡಕುರುಗೋಡು ಗ್ರಾಮ ಪಂಚಾಯಿತಿ ಕಾರ್ಯಾಲಯ, ಗೌರಿಬಿದನೂರು ತಾಲ್ಲೂಕು ಇವರಿಗೆ ಅನುಮೋದಿತ ವಿನ್ಯಾಸನಕ್ಷೆಯ ಮೂರು ಪ್ರತಿಗಳೊಂದಿಗೆ ಮುಂದಿನ ಸೂಕ್ತ ಕ್ರಮ್ಕಕಾಗಿ ಕಳುಹಿಸಲಾಗಿದೆ ಹಾಗೂ ವಿನ್ಯಾಸಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾಯ್ದೆಯಡಿಯಲ್ಲಿ **ಅನುಮೋದಿಸಿದ ನಂತರ ಒಂದು ಪ್ರತಿಯನ್ನು** (ಆದೇಶದೊಂದಿಗೆ) **ಈ ಕಛೇರಿಗೆ ಕಳುಹಿಸುವಂತೆ ಕೋರಿದೆ.**
2. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, (ಬೆಂ.ವಿ) ಬೆಂಗಳೂರು ಇವರಿಗೆ ನಕ್ಷೆಯ ಪ್ರತಿಯೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. **ಭೂ-ದಾಖಲೆಗಳ ಸಹಾಯಕ ನಿರ್ದೇಶಕರು, ಗೌರಿಬಿದನೂರು ತಾಲ್ಲುಕು, ಗೌರಿಬಿದನೂರು** ಇವರಿಗೆ ಅನುಮೋದಿತ **ವಿನ್ಯಾಸನಕ್ಷೆಯ ಪ್ರತಿಯನ್ನು ಕಳುಹಿಸುತ್ತಾ ಸರ್ವೆನಕ್ಷೆಯಂತೆ ಸ್ಥಳದಲ್ಲಿ ತಾಳೆ ಹೊಂದುತ್ತಿರುವ ಬಗ್ಗೆ ಏಳು ದಿನಗಳೊಳಗಾಗಿ ಮಾಹಿತಿ ಈ ಕಛೇರಿಗೆ ನೀಡುವುದು ಇಲ್ಲವಾದಲ್ಲಿ ಅನುಮೋದಿತ ವಿನ್ಯಾಸನಕ್ಷೆಯು ಸರ್ವೆನಕ್ಷೆಯಂತೆ ಸರಿಯಿದೆ ಎಂದು ಭಾವಿಸಲಾಗುತ್ತದೆ.**
4. ಅರ್ಜಿದಾರರಾದ ಶ್ರೀಮತಿ ಸ್ವಪ್ನಕುಮಾರಿ ಕೋಂ ಮಾರುತಿರೆಡ್ಡಿ, ಎಂ.ಹೆಚ್, ಮೇಳ್ಯ ಗ್ರಾಮ ಮತ್ತು ಅಂಚೆ, ನಗರಗೆರೆ ಹೋಬಳಿ, ಗೌರಿಬಿದನೂರು ತಾಲ್ಲೂಕು ಇವರಿಗೆ ನೀಡುತ್ತಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದೊಡ್ಡಕುರುಗೋಡು ಗ್ರಾಮ ಪಂಚಾಯಿತಿ ಇವರಿಂದ ನಿಯಮಗಳನ್ನು ಅನುಸರಿಸಿ ಅನುಮೋದಿತ ವಿನ್ಯಾಸನಕ್ಷೆಯನ್ನು ಪಡೆಯಲು ಸೂಚಿಸಲಾಗಿದೆ.
5. ಕಛೇರಿ ಪ್ರತಿ.

20/10/2020
ನಗರ ಮತ್ತು ಗ್ರಾಮಾಂತರ ಯೋಜನಾ
ಸಹಾಯಕ ನಿರ್ದೇಶಕರು,
ಚಿಕ್ಕಬಳ್ಳಾಪುರ.

Scanned with CamScanner